# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 793
ಸದಸ್ಯರ ಹೆಸರು : ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು.
ಉತ್ತರಿಸುವ ದಿನಾಂಕ : 12-12-2023.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ನೀರಿನ ಸದ್ಬಳಕೆ ಮತ್ತು ಅಪವ್ಯಯ ತಪ್ಪಿಸಲು ಹನಿನೀರಾವರಿ ಪದ್ಧತಿ ಜಾರಿಯಲ್ಲಿ ತರಲಾಗಿದ್ದು, ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಲು ಈ ಹಿಂದೆ ತಾರತಮ್ಯವಿಲ್ಲದೆ; ಎಲ್ಲಾ ರೈತರಿಗೂ 90% ಸಹಾಯಧನ ನೀಡಲಾಗುತ್ತಿದ್ದದನ್ನು ಪರಿಷ್ಕರಣೆ ಮಾಡಿ ಇತ್ತಿಚಿಗೆ ಸಾಮಾನ್ಯ ರೈತರಿಗೆ 75% ಹಾಗೂ ಪರಿಶಿಷ್ಟ ಪಂಗಡ ರೈತರಿಗೆ 90% ಸಹಾಯಧನ ನೀಡಲಾಗುತ್ತಿದ್ದು ಮತ್ತು ಅದಕ್ಕೆ ಉಪಯೋಗಿಸಲಾಗುವ ಡ್ರಿಪ್ ಇತ್ಯಾದಿ ಸಲಕರಣೆಗಳು ಗರಿಷ್ಟ 4-5 ವರ್ಷಗಳಿಗೆ ಮಾತ್ರ ಉಪಯೋಗಕ್ಕೆ ಬರುತ್ತಿದ್ದು, ಮುಂದೆ ಉಪಯೋಗಕ್ಕೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ | ಬಂದಿದಲ್ಲಿ, 5 ವರ್ಷಗಳ ನಂತರ ಅದೇ ರೈತರಿಗೆ ನೀರಾವರಿ ಮಾಡಿಕೊಳ್ಳಲು ಪುನ: ಹನಿನೀರಾವರಿಗಾಗಿ ಸಹಾಯಧನ ನೀಡಬಹುದೇ; | ರೈತರಿಗೆ ಪುನ: ಸಹಾಯಧನ ನೀಡುವ ಬಗ್ಗೆ ಸರ್ಕಾರವು ಪರಿಶೀಲಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಈ ಹಿಂದೆ ಅಳವಡಿಸಿಕೊಂಡಿದ್ದ ಸೂಕ್ಷ್ಮನೀರಾವರಿ ಪದ್ಧತಿ ಹಾಳಾಗಿದಲ್ಲಿ/ ಘಟಕ ಕಾರ್ಯನಿರ್ವಹಿಸದೇ ಇದ್ದಲ್ಲಿ 7 ವರ್ಷಗಳ ನಂತರ ಅದೇ ಜಮೀನಿಗೆ ಮತ್ತೊಮ್ಮೆ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಹಾಯಧನ ನೀಡಲಾಗುತ್ತಿದೆ. |
| ಇ | ಈ ಹಿಂದೆ ನೀಡಲಾಗುತ್ತಿರುವಂತೆ ಎಲ್ಲಾ ರೈತರಿಗೂ 90% ಸಹಾಯಧನ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಇಲ್ಲ |

HORTI 471 HGM 2023

(ಎಸ್.ಎಸ್.ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು

C:\Users\WIN\Desktop\Belgavi Session 4.12.23\Reply- LCQ-793 (685).docx